# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಾಗಡಿ

## ಸಿ.ಸಿ.6715/2024

ಪಿರ್ಯಾದುದಾರರುಃ ಸರ್ಕಾರದ ಪರವಾಗಿ ಮಾಗಡಿ ಪಿ. ಎಸ್.

– ವಿರುದ್ಧ --

ಆರೋಪಿ: ದೇವರಾಜು.ಆರ್,
ಬಿನ್ ಲೇಟ್ ರಂಗಸ್ವಾಮಿ,
ವಯಸ್ಸು 49 ವರ್ಷ,
ವಾಸಃ ನಂ.280, 5 ನೇ ಮುಖ್ಯ ರಸ್ತೆ,
4 ನೇ ಅಡ್ಡರಸ್ತೆ, ಹಟ್ಟಿಲಕ್ಕಮ್ಮ ದೇವಸ್ಥಾನ ರಸ್ತೆ,
ಮಲ್ಲಸಂದ್ರ, ಬಗಲಗುಂಟೆ,
ಬೆಂಗಳೂರು, ಬೆಂಗಳೂರು ನಗರ.

## ಆರೋಪಣೆ

ಶ್ರೀ ಶ್ರೀನಿವಾಸ ಕೆ. ಆರ್, ಬಿ. ಎ. ಎಲ್., ಎಲ್. ಎಲ್. ಎಮ್., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ, ಆದ ನಾನು ನಿಮ್ಮಗಳ ಮೇಲೆ ಆರೋಪಿಸುವುದೇನೆಂದರೆಃ-

ದಿನಾಂಕ 21.07.2024 ರಂದು ಮದ್ಯಾಹ್ನದ ವೇಳೆ ಗೋವಿಂದಯ್ಯ ಬಿನ್ ಲೇಟ್ ಹೊನ್ನಪ್ಪ ರವರು ತಮ್ಮ ಸ್ವಂತ ಕೆಲಸದ ಮೇಲೆ ಬೈರನಹಳ್ಳಿಯಿಂದ ತಮ್ಮ ಬಳಿ ಇದ್ದ ಕೆ.ಎ.41-ಎಲ್.0314 ಟಿ.ವಿ.ಎಸ್ ನಲ್ಲಿ ಮಾಗಡಿ ತಾಲ್ಲೂಕು, ಬೈರನಹಳ್ಳಿ ಗೇಟ್ ಗೆ ಬಂದು ಸದರಿ ಗೇಟಿನಲ್ಲಿರುವ ಬಸ್ ತಂಗುದಾಣದ ಬಳಿ ಟಿ.ವಿ.ಎಸ್ ನಿಲ್ಲಿಸಿ ಮಾಗಡಿಗೆ ಬೇರೆ ವಾಹನದಲ್ಲಿ ಹೋಗಿ ತಮ್ಮ ಕೆಲಸಗಳನ್ನು ಮುಗಿಸಿಕೊಂಡು ವಾಪಸ್ ಬೈರನಹಳ್ಳಿಗೆ ಬರಲು ಮಾಗಡಿಯಿಂದ ಆಟೋರಿಕ್ಷಾವೊಂದರಲ್ಲಿ ಬೈರನಹಳ್ಳಿ ಗೇಟ್ ಗೆ ಬಂದು, ಗೇಟಿನ ಬಳಿ ಇರುವ ಬಸ್ ತಂಗುದಾಣದ ಸಮೀಪ ನಿಲ್ಲಿಸಿದ್ದ ಮೇಲ್ಕಂಡ ಟಿ.ವಿ.ಎಸ್ ಗಾಡಿಯನ್ನು ತೆಗೆದುಕೊಂಡು ಅದೇ ದಿನ ಸಂಜೆ ಸುಮಾರು 4.00 ಗಂಟೆ ವೇಳೆಯಲ್ಲಿ ತಮ್ಮ ಮನೆಗೆ ಹೋಗಲು ಟಿ.ವಿ.ಎಸ್ ಓಡಿಸುತ್ತಾ ಹುಲಿಯೂರುದುರ್ಗ-ಮಾಗಡಿ ಮುಖ್ಯ ರಸ್ತೆಯಲ್ಲಿ ಬೈರನಹಳ್ಳಿ ಗೇಟ್ ಬಳಿ ಮುಖ್ಯ ರಸ್ತೆಯಿಂದ ಊರಿನ ಕಡೆಗೆ ಬಲ ತಿರುವು ತೆಗೆದುಕೊಳ್ಳಲು ಹಿಂಬರುವ ವಾಹನಗಳಿಗೆ ಸಂಜ್ಞೆ ಸೂಚನೆಗಳನ್ನು

ನೀಡುತ್ತಾ ಬಲಗಡೆಗೆ ರಸ್ತೆ ತಿರುವು ಪಡೆಯುತ್ತಿದ್ದಾಗ ಅದೇ ವೇಳೆಗೆ ಕೆ.ಎ.02-ಕೆ..ಎನ್-1409 ಬಜಾಜ್ ಪ್ಲಾಟಿನಾ ಬೈಕಿನ ಚಾಲಕರಾದ ಆರೋಪಿಯಾದ ನೀವು ಬೈಕಿನಲ್ಲಿ ಚಾಸಾ.2 ರವರಾದ ತೇಜಸ್ ರವರನ್ನು ಹಿಂಬದಿ ಸವಾರರಾಗಿ ಕೂರಿಸಿಕೊಂಡು ಬೈಕನ್ನು ಅತಿವೇಗ ಹಾಗೂ ಅಜಾಗರುಕತೆಯಿಂದ ಚಾಲಯಿಸಿಕೊಂಡು ಹೋಗಿರುತ್ತೀರಿ, ಆದ್ದರಿಂದ ನೀವು ಬಿ.ಎನ್.ಎಸ್. ಕಲಂ 281 ರಡಿಯಲ್ಲಿ ಅಪರಾಧ ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಬೈಕನ್ನು ಅತಿವೇಗವಾಗಿ ಚಾಲನೆ ಮಾಡಿ ರಸ್ತೆಯ ಬಲಬದಿಗೆ ಬಂದು ರಸ್ತೆ ತಿರುವು ಪಡೆಯುತ್ತಿದ್ದ ಗೋವಿಂದಯ್ಯ ರವರ ಟಿ.ವಿ.ಎಸ್ ಗೆ ಡಿಕ್ಕಿ ಹೊಡೆಸಿದ ಪರಿಣಾಮ ಗೋವಿಂದಯ್ಯ ರವರು ಕೆಳಗೆ ಬಿದ್ದು ತಲೆ, ಮೈ ಕೈಕಾಲುಗಳಿಗೆ ತೀವ್ರತರವಾದ ಏಟುಗಳಾಗಿದ್ದು, ಹಾಗೂ ಚಾಲಕ ಆರೋಪಿಯಾದ ನಿಮಗೂ ಸಹಾ ಕೆಳತುಟಿ, ಎಡಮಣಿಕಟ್ಟು ಮತ್ತು ಎಡಮಂಡಿಗೆ ಸಾಮಾನ್ಯ ಸ್ವರೂಪದ ರಕ್ತಗಾಯಗಳಾಗಿದ್ದು ಮತ್ತು ನಿಮ್ಮ ಜೊತೆ ಬಂದಿದ್ದ ಬೈಕಿನ ಹಿಂಬದಿ ಸವಾರ ಚಾಸಾ.2 ರವರಾದ ತೇಜಸ್ ರವರಿಗೆ ಎರಡು ಕೈಗಳಿಗೆ ಸಾಮಾನ್ಯ ಸ್ವರೂಪದ ರಕ್ತಗಾಯಗಳಾಗಿರುತ್ತವೆ, ಆದ್ದರಿಂದ ನೀವು ಬಿ.ಎನ್.ಎಸ್. ಕಲಂ 125(ಎ) ರಡಿಯಲ್ಲಿ ಅಪರಾಧ ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಬೈಕನ್ನು ಅತಿವೇಗವಾಗಿ ಚಾಲನೆ ಮಾಡಿ ರಸ್ತೆಯ ಬಲಬದಿಗೆ ಬಂದು ರಸ್ತೆ ತಿರುವು ಪಡೆಯುತ್ತಿದ್ದ ಗೋವಿಂದಯ್ಯ ರವರ ಟಿ.ವಿ.ಎಸ್ ಗೆ ಡಿಕ್ಕಿ ಹೊಡೆಸಿದ ಪರಿಣಾಮ ಗೋವಿಂದಯ್ಯ ರವರು ಕೆಳಗೆ ಬಿದ್ದ, ಗಾಯಾಳು ಗೋವಿಂದಯ್ಯ ರವರನ್ನು ಚಿಕಿತ್ಸೆಗೆಂದು ಮಾಗಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ, ಗಾಯಾಳು ಗೋವಿಂದಯ್ಯ ರವರು ಮಾರ್ಗಮಧ್ಯೆ ಮೃತರಾಗಿರುತ್ತಾರೆ. ಆದ್ದರಿಂದ ನೀವು ಬಿ.ಎನ್.ಎಸ್. ಕಲಂ 106(1) ರಡಿಯಲ್ಲಿ ಅಪರಾಧ ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ಪ್ರಃ- 1) ಈಗ ಓಳಿ ಹೇಳಲಾದ ಆರೋಪಣೆಗಳನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ ಆ-1

ಪ್ರಃ- 2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ ಆ-1

(ಆರೋಪಣೆಯನ್ನು ಆರೋಪಿತರಿಗೆ ಅವರಿಗೆ ಗೊತ್ತಿದ್ದ ಭಾಷೆಯಲ್ಲಿ ಓಳಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು, ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ.)

ದಿನಾಂಕಃ 08.01.2026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ನ್ಯಾಯಾಲಯ, ಮಾಗಡಿ.